ಮಾನವೀಯ ಅಗಾಧತೆಯಿಂದಾಗಿ ಜೀವಪುರ ಆಹ್ಲಾದಕರವಾಗಿ ಕಂಗೊಳಿಸುತ್ತಿತ್ತು.

ಊರು ಚುನಾವಣೆಗಳ ಪ್ರಕ್ರಿಯೆಗೊಳಗಾಗಿ ಅನೇಕ ರಾಜಕೀಯ ಪಕ್ಷಗಳನ್ನು ಜನ ಬೆಂಬಲಿಸುತ್ತಿದ್ದರು. ಅವರವರ ಕ್ಯಾಂಡಿಡೇಟುಗಳ ಪ್ರಚಾರದ ವೈಖರಿಯಲ್ಲಿ ಅಬ್ಬರ ಇರುತ್ತಿತ್ತಾದರೂ, ವೈಯಕ್ತಿಕ ಸಂಬಂಧಗಳ ಹಿತಕ್ಕೆ ಆತಂಕವಾಗದಂತೆ ಅವರು ಜಾಗರೂಕತೆಯಲ್ಲಿ ಇರುತ್ತಿದ್ದುದು ಅಚ್ಚರಿಯ ಸಂಗತಿಯಾಗಿ ಪರಿಣಮಿಸಿತ್ತು. ಈ ಕಾರಣವಾಗಿ ಚುನಾವಣೆ ಮುಗಿದ ಬಳಿಕ ಜನ ಎಂದಿನಂತೆ ನಿರಾಳವಾಗಿರುತ್ತಿದ್ದರು. ಕೂದಲೆಳೆಯಷ್ಟೂ ರಾಜಕೀಯ ದ್ವೇಷವಿಲ್ಲದವರಾಗಿ, ಊರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಹಿರಿಯರ ಸಮ್ಮುಖದಲ್ಲಿ ಚಿಂತಿಸಿ ಪರಿಹಾರ ಕಂಡುಕೊಳ್ಳುತ್ತಿದ್ದರು.

ಒಬ್ಬೊಬ್ಬ ಕುಲಬಾಂಧವರು ತಮ್ಮದೇ ಆದ ಸಮಾಜಗಳನ್ನು ರೂಪಿಸಿಕೊಂಡಿದ್ದರು. ಪರಸ್ಪರ ಸಹಕಾರದ ಈ ಸಮಾಜಗಳನ್ನು ಸದೃಢವಾಗಿಯೂ, ಆರೋಗ್ಯಕರವಾಗಿಯೂ ಕುಶಲಗೊಳಿಸಿತ್ತು. ಜಾತಿಗಿಂತ ಅವರಿಗೆ ಮನುಷ್ಯತ್ವ ಮುಖ್ಯವಾಗಿ ಮಾನವಪ್ರೇಮ ಜೀವಪುರದಲ್ಲಿ ನಿತಾಂತವಾಗಿತ್ತು. ಗಮನಾರ್ಹ ಸಂಗತಿಯೆಂದರೆ ಊರಿನ ಹಿತದ ಕಣ್ಗಾವಲಿನಂತಿದ್ದವರಲ್ಲಿ ಬಣಜಿಗರ ಮಾಂತಪ್ಪ, ಪಂಚಮಸಾಲಿ ಸಂಗನಬಸಪ್ಪ, ಬ್ರಾಹ್ಮಣರ ವೆಂಕಟರಾವ್, ಮುಸ್ಲಿಮರ ಹಾಜಿ ಪೀರಸಾಬ, ಕ್ರಿಶ್ಚಿಯನ್‌ರ ಅಂತೋಣಿ, ದೇವಾಂಗದ ರಾಮಚಂದ್ರಪ್ಪ, ಕುರುಹಿನಶೆಟ್ಟರ ನೀಲಕಂಠಪ್ಪ, ಬಡಿಗೇರ ಕಾಳಪ್ಪ, ಪತ್ತಾರ ಶಂಕರಪ್ಪ, ಹಿರೇಮಠದ ಶಿವಲಿಂಗಯ್ಯ, ಜೈನರ ನೇಮಿನಾಥ, ಮರಾಠರ ಜ್ಯೋತಿಬಾ, ಪಟೇಗಾರ ರಾಜಣಸಾ, ಕುಂಬಾರ ಈರಪ್ಪ, ಕಮ್ಮಾರ ರಾಯಪ್ಪ, ವಡ್ಡರ ನಾಗಪ್ಪ, ಚಲವಾದಿ ನೀಲಪ್ಪ, ಮಾದರ ಚೆನ್ನಪ್ಪ, ಮಡಿವಾಳ ಮಾಗುಂಡಯ್ಯ, ತಳವಾರ ಕಲ್ಲಪ್ಪ, ಬಾಗವಾನ ಅಲ್ಲಾಭಕ್ಷ, ಗಾಣಿಗೇರ ಪರೂತಪ್ಪ ಊರಿನ ಒಂದು ಸಮಾಜದ ಸದಸ್ಯರಾಗಿ ಊರ ಬಸವಣ್ಣ ಜಾತ್ರೆ ಮಾಬುಸುಬಹಾನಿ ಉರುಸು, ಗ್ರಾಮದೇವಿಯ ಉತ್ಸವ, ಶ್ರೀಮಠದ ಶಿವಾನುಭವ, ಶ್ರಾವಣದ ಕಾರ್ಯಕ್ರಮಗಳ ಉಸ್ತುವಾರಿ ವಹಿಸಿಕೊಂಡಿದ್ದಲ್ಲದೆ, ಯಾವುದೇ ಪರಿಸ್ಥಿತಿ ಎದುರಾದರೂ ಅವುಗಳನ್ನು ನಿಭಾಯಿಸುವ ಛಾತಿವಂತರಾಗಿದ್ದರು. ಇವರೆಲ್ಲರೂ ಹೆಚ್ಚು ಕಡಿಮೆ ಒಂದೇ ವಯೋಮಾನದವರಿದ್ದು, ತಮ್ಮ ತಮ್ಮ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಕೊಂಡಿದ್ದರು.

★★★

ಊರಿನ ಈ ಸಮಾಜ ಸೃಷ್ಟಿಗೂ ಒಂದು ಹಿನ್ನೆಲೆಯಿತ್ತು.

ಇಪ್ಪತ್ತು ವರ್ಷಗಳ ಹಿಂದಿನ ಪ್ರಸಂಗ. ಗುಡ್ಡದ ಮೇಲಿನ ಹನುಮಂತ, ಊರಿಗೆ ಪ್ರಭಾವಿ ದೇವರೆನಿಸಿದ್ದ. ಅವನು ಉದ್ಭವ ಮೂರ್ತಿಯೆನ್ನುವ ಪ್ರತೀತಿ ಇದ್ದುದರಿಂದ ಜನ ಹನುಮಂತ ದೇವರಲ್ಲಿ ಭಯ, ಭಕ್ತಿ, ಶ್ರದ್ಧೆ ಇರಿಸಿಕೊಂಡಿದ್ದರು. ಅವನ ದರುಶನ ಅವರಿಗೆ ಪರಮ ಸೌಭಾಗ್ಯವೆನಿಸಿತ್ತು. ಕೆಲವರಂತೂ ದಿನಾಲು ನಸುಕಿನಲ್ಲಿ ನೂರಾರು ಪಾವಟಿಗೆಗಳನ್ನೇರಿ, ದರ್ಶನ ಪಡೆದು, ಅವನ ಅಂಗಾರ ಹಚ್ಚಿಕೊಂಡು ಬಂದು ತಮ್ಮ ಕೆಲಸಗಳಲ್ಲಿ ತೊಡುಗುವುದನ್ನು ರೂಢಿಸಿಕೊಂಡಿದ್ದರು. ಶನಿವಾರವಂತೂ ಎಲ್ಲಾ ವರ್ಗದ ಜನ ಗುಡ್ಡ ಹತ್ತಿ ಇಳಿಯುತ್ತಿದ್ದರು. ಜಡ್ಡುಜಾಪತ್ರಯದ ಜನ ಕಷ್ಟಪಟ್ಟು ಗುಡ್ಡವನ್ನೇರಿ, ದೀಪಗಂಬದ ಕಟ್ಟೆಯ ಮೇಲಿರುವ ದೊಡ್ಡ ಆಕಾರದ ಹನುಮಂತ ದೇವರ ಮೆಟ್ಟುಗಳನ್ನು ಎತ್ತಿಕೊಂಡು ತಮ್ಮ ಮೈತುಂಬ ಬಡಿದುಕೊಂಡು, ದೇವರ ಮೇಲಿನ ಮೇಣವನ್ನು ಗೀರಿ, ಅದನ್ನು ತಾಮ್ರದ ಅಥವಾ ಬೆಳ್ಳಿಯ ತಾಯತಗಳಲ್ಲಿ ತುಂಬಿ ಕೊರಳಿಗೋ, ರಟ್ಟೆಗೋ ಕಟ್ಟಿಕೊಂಡು ಸಮಾಧಾನ ಅನುಭವಿಸುವರು.

ಹನುಮಂತ ದೇವರ ಓಕುಳಿ ಸಮಯದಲ್ಲಿ ಊರೆಂಬೋ ಊರು ಸಂಭ್ರಮದಲ್ಲಿ ತೇಲಾಡುವುದು.